# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ
# UNIVERSITY OF HORTICULTURAL SCIENCES, BAGALKOT

## ದಿನಾಂಕ 04–06–2018 ರಂದು ಮಧ್ಯಾಹ್ನ 3:00 ಗಂಟೆಗೆ ಕೊಠಡಿ ಸಂ. 246, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇಲ್ಲಿ ನಡೆದ ತೋವಿವಿ, ಬಾಗಲಕೋಟದ ವ್ಯವಸ್ಥಾಪನಾ ಮಂಡಳಿಯ 45ನೇ (ತುರ್ತು) ಸಭೆಯ ನಡುವಳಿಗಳು

## MINUTES OF 45TH (EMERGENT) MEETING OF THE BOARD OF MANAGEMENT HELD ON 04-06-2018 AT 3.00 PM AT ROOM NO. 246, M. S. BUILDING, BENGALURU

**ಹಾಜರಾದ ಸದಸ್ಯರು**

**MEMBERS PRESENT**

| | | | |
|---|---|---|---|
| 1. | **ಡಾ. ಡಿ. ಎಲ್. ಮಹೇಶ್ವರ್**<br>ಕುಲಪತಿಗಳು ಹಾಗೂ ಅಧ್ಯಕ್ಷರು, ವ್ಯವಸ್ಥಾಪನಾ ಮಂಡಳಿ<br>ತೋವಿವಿ, ಬಾಗಲಕೋಟ | : | ಅಧ್ಯಕ್ಷರು |
| | **Dr. D. L. Maheswar**<br>Vice-Chancellor and Chairman<br>Board of Management,UHS, Bagalkot | : | Chairman |
| 2. | **ಶ್ರೀ ಪ್ರಸನ್ನ ಕುಮಾರ್**<br>ಸರ್ಕಾರದ ಉಪಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಇವರ ಪ್ರತಿನಿಧಿಗಳು ಮತ್ತು<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ತೋಟಗಾರಿಕೆ ಇಲಾಖೆ, ಎಂ. ಎಸ್. ಬಿಲ್ಡಿಂಗ್, ಬೆಂಗಳೂರು–560 001. | : | ಸದಸ್ಯರು |
| | **Sri Prasanna Kumar**<br>Deputy Secretary to Govt, Dept.of Horticulture,<br>Representative of Principal Secretary GOK and<br>Member, Board of Management, UHS, Bagalkot,<br>Department of Horticulture,<br>M.S. Building, Bengaluru-560001. | : | Member |
| 3. | **ಶ್ರೀಮತಿ ಪದ್ಮಾವತಿ**<br>ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಇವರ ಪ್ರತಿನಿಧಿಗಳು ಮತ್ತು<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು–560 001. | : | ಸದಸ್ಯರು |
| | **Mrs. Padmavathi**<br>Additional Secretary to GOK, Dept. of Finance<br>Representative of Principal Secretary GOK and<br>Member, Board of Management, UHS, Bagalkot,<br>Department of Finance, Vidhana Soudha,<br>Bengaluru-560001. | : | Member |
| 4. | **ಡಾ. ಕೆ. ಜಿ. ಪರಮೇಶ್ವರಪ್ಪ**<br>ಸದಸ್ಯರು, ತೋವಿವಿ, ಬಾಗಲಕೋಟ<br>ನೀಲಾಮೃತಾ, ಮತೊಡು ಬಸ್ ನಿಲ್ದಾಣ ಹತ್ತಿರ<br>ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಎದುರುಗಡೆ<br>ಸವಳಂಗಾ ರಸ್ತೆ, ಅಬ್ಬಳಗೆರೆ ಅಂಚೆ, ಶಿವಮೊಗ್ಗೆ–577225. | : | ಸದಸ್ಯರು |

| | | | |
|---|---|---|---|
| | **Dr. K. G. Parameshwarappa**<br>Hon'ble Member, Board of Management, UHS, Bagalkot Neelamritha, Near Mathodu Bus Stop Opp: Agriculture University Organic Farming, Slowlanga Road, Abbalagere Post, Shivamogga-577225 | : | Member |
| 5. | **ಶ್ರೀ ಶಂಕರಪ್ಪ ಬಸಪ್ಪ ಮಳಲಿ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಮು:ಪೋ: ಉತೂರು, ತಾ: ಮುಧೋಳ, ಜಿ: ಬಾಗಲಕೋಟ | : | ಸದಸ್ಯರು |
| | **Sri Shankarappa Basappa Malali**<br>Member, Board of Management, UHS, Bagalkot<br>Mu:Po: Utturu, Mudhol Taluka, Dist: Bagalkot | : | Member |
| 6. | **ಶ್ರೀ ಎಸ್. ಎನ್. ಮಂಜುನಾಥಗೌಡ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಶೆಟ್ಟಿಮಾದಮಂಗಲ ಗ್ರಾಮ, ವೆಲಗಲಬುರ್ರೆ (ಅಂಚೆ), ವಯಾ ದಳಸನೂರು, ಮದನಹಳ್ಳಿ ಪಂಚಾಯಿತು–563126, ತಾಲ್ಲೂಕು ಮತ್ತು ಜಿಲ್ಲೆ: ಕೋಲಾರ | : | ಸದಸ್ಯರು |
| | **Sri S. N. Manjunathagowda**<br>Member, Board of Management,<br>UHS, Bagalkot<br>Shettymadamangala Village,<br>Velagalaburre Post, Via Dalasanur, Madanahally Panchayath-563126, Tq & Dist : Kolar | : | Member |
| 7. | **ಶ್ರೀ ಆರ್. ಎಂ. ನಾಗೇಶ್**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ನಂ. 25, ಜುಬಿಲಿ ಶಾಲೆ ಹತ್ತಿರ,<br>ಪಾಪರೆಡ್ಡಿಪಾಳ್ಯ, ನಾಗರಬಾವಿ,ಬೆಂಗಳೂರು–560 072. | : | ಸದಸ್ಯರು |
| | **Sri. R. M. Nagesh**<br>Member, Board of Management, UHS Bagalkot<br>No. 25, Near Jubilee School,<br>Papareddypalya, Nagarbhavi,<br>Bengaluru-560 072. | : | Member |
| 8. | **ಶ್ರೀ ಯೋಗಿರಾಜ ಬಿ. ಪಾಟೀಲ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಸಂ. 142, "ಸದ್ಗುರು",<br>5ನೇ ಕ್ರಾಸ್, ಕುಸುಮನಗರ ಮುಖ್ಯ ರಸ್ತೆ<br>ವೈದ್ಯ ಮಠ ಸಂಕೀರ್ಣ ಹಿಂದುಗಡೆ,ಧಾರವಾಡ–580008. | : | ಸದಸ್ಯರು |
| | **Dr. Yogiraj B. Patil**<br>Member, Board of Management, UHS Bagalkot<br>No. 142, "Sadguru"<br>5th Cross, Kusumnagar Main Road<br>Backside of Vaidya Math Complex,Dharwad-580008. | : | Member |
| 9. | **ಶ್ರೀಮತಿ ಕಸ್ತೂರಿ ತವನಪ್ಪ ಅಷ್ಟಗಿ**<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಮಾರ್ಕೆಟ್ ರಸ್ತೆ, ಮಾರುತಿ ಗುಡಿ ಹಿಂಡುಗಡೆ<br>ಮು:ಪೋ: ಉಪ್ಪಿನ ಬೆಟಗೇರಿ<br>ತಾ:ಜಿ: ಧಾರವಾಡ–581206 | : | ಸದಸ್ಯರು |
| | **Smt. Kasturi Tavanappa Astagi**<br>Member, Board of Management, UHS Bagalkot<br>Market Road, Behind Maruti Temple, At Post: Uppin Betageri, Tq:Dist.: Dharwad-581206. | : | Member |

| | | | |
|---|---|---|---|
| 10. | **ಡಾ. ಹೆಚ್. ಬಿ. ಲಿಂಗಯ್ಯ**<br>ಶಿಕ್ಷಣ ನಿರ್ದೇಶಕರು ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ | : | ಸದಸ್ಯರು |
| | **Dr. H. B. Lingaiah**<br>Director of Education and Member<br>Board of Management,<br>UHS, Bagalkot | : | Member |
| 11. | **ಡಾ. ಕೆ. ಎಂ. ಇಂದಿರೇಶ್**<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ವ್ಯವಸ್ಥಾಪನಾ ಮಂಡಳಿ, ತೋವಿವಿ,<br>ಬಾಗಲಕೋಟ | : | ಸದಸ್ಯ<br>ಕಾರ್ಯದರ್ಶಿಗಳು |
| | **Dr. K. M. Indiresh**<br>Registrar & Member-Secretary,<br>Board of Management,<br>Univeristiy of Horticultural Sciences,<br>Bagalkot. | : | Member<br>Secretary |

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ ಇವರು ಸಭೆಗೆ ಹಾಜರಾದ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು. ಗೌರವಾನ್ವಿತ ಕುಲಪತಿಗಳು ಮತ್ತು ಅಧ್ಯಕ್ಷರಾದ ಡಾ. ಡಿ. ಎಲ್. ಮಹೇಶ್ವರ್ ಇವರು ಕೂಡ ವ್ಯವಸ್ಥಾಪನಾ ಮಂಡಳಿಯ 45ನೇ (ತುರ್ತು) ಸಭೆಗೆ ಹಾಜರಾದ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು. ಈ ತುರ್ತು ಸಭೆಯ ಅಗತ್ಯದ ಬಗ್ಗೆ ಮಾನ್ಯ ಸದಸ್ಯರುಗಳಿಗೆ ತಿಳಿಸಲಾಯಿತು. ಕುಲಸಚಿವರು ಗೌರವಾನ್ವಿತ ಕುಲಪತಿಗಳು ಹಾಗೂ ಅಧ್ಯಕ್ಷರು ಇವರಿಗೆ ಸಭೆಯನ್ನು ಕೈಗೊಂಡು ಕಾರ್ಯಸೂಚಿಗಳನ್ವಯ ಚರ್ಚೆಗಳನ್ನು ಕೈಗೊಳ್ಳಲು ವಿನಂತಿಸಿದರು. ಸಭೆಯಲ್ಲಿ ತೋವಿವಿ, ಬಾಗಲಕೋಟದ 2018–19ನೇ ಸಾಲಿನ ಆಯವ್ಯಯ ಅಂದಾಜು ಮತ್ತು 2017–18 ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳು, ಸರ್ಕಾರದಿಂದ ಬಿಡುಗಡೆಯಾದ ಅನುದಾನ ಮತ್ತು ಖರ್ಚು–ವೆಚ್ಚಗಳನ್ನು ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು. ದಿನಾಂಕ 4–6–2018 ರ ಬೆಳಗ್ಗೆ ತೋವಿವಿ, ಬಾಗಲಕೋಟೆಯ ಪ್ರಾದೇಶಿಕ ಕಛೇರಿ, ತೋಟಗಾರಿಕೆ ಮಹಾವಿದ್ಯಾಲಯ, ಜಿ.ಕೆ.ವಿ.ಕೆ. ಆವರಣ, ಬೆಂಗಳೂರು ಇಲ್ಲಿ ನಡೆದ 18ನೇ ಹಣಕಾಸು ಸಮಿತಿಯಲ್ಲಿ ಮಂಡಿಸಿದ 2018–19ರ ಆಯವ್ಯಯ ಅಂದಾಜುಗಳು ಹಾಗೂ 2017–18 ರ ಪರಿಷ್ಕೃತ ಆಯವ್ಯಯವನ್ನು ಕೂಲಂಕಷವಾಗಿ ಚರ್ಚಿಸಿ, ಸಮಿತಿಯು 2018–19ರ ಆಯವ್ಯಯವನ್ನು ಶಿಫಾರಸ್ಸು ಮಾಡಿ, ವ್ಯವಸ್ಥಾಪನ ಮಂಡಳಿಯ ಅನುಮೋದನೆಗೆ ಮಂಡಿಸಲು ಪ್ರಸ್ತಾಪವನ್ನು ಗೌರವಾನ್ವಿತ ಮಂಡಳಿ ಸಭೆಯ ಗಮನಕ್ಕೆ ತರಲಾಯಿತು.

At the outset, the Registrar and Member Secretary welcomed members of the Board of Management to the meeting. Hon'ble Vice Chancellor and Chairman Dr. D. L. Maheshwar also welcomed all the members of Board of Management of UHS, Bagalkot for the 45th (Emergent) Meeting of Board of Management. All members were informed regarding the necessity of this emergent meeting. The Registrar requested the Hon'ble Vice Chancellor and

Chairman to chair the meeting and to conduct the deliberations as per the agenda for discussion. The proposed budget for the year 2018-19 and revised budget for the year 2017-18 of UHS, Bagalkot and budget released by the Government and receipts and payments were placed before the meeting and discussed in lengthy. It was brought to the notice of the Board that the proposed budget for the year 2018-19 and revised budget for the year 2017-18 were placed before the 18th Meeting of Finance Committee of UHS, Bagalkot held at morning of 4-6-2018 at Regional Office, College of Horticulture, G.K.V.K. Campus, Bengaluru, after detailed deliberation, the finance committee recommended the proposed budget for the year 2018-19 for Board of Management for kind approval.

| **ಕಾರ್ಯಸೂಚಿ ಸಂ.1** | **ತೋವಿವಿಯ 2018-19ನೇ ಸಾಲಿನ ಆಯವ್ಯಯ ಅಂದಾಜು ಮತ್ತು 2017-18ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳು.** |
|---|---|
| | **ಚರ್ಚೆ ಮತ್ತು ಠರಾವು :**<br>ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದ 2018-19ನೇ ಸಾಲಿನ ಆಯವ್ಯಯ ಅಂದಾಜು ಮತ್ತು 2017-18ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳ ಬಗ್ಗೆ ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಲಾಯಿತು. ಸಭೆಯಲ್ಲಿ 2017-18ನೇ ಸಾಲಿನ ಆಯವ್ಯಯ ಅಂದಾಜುಗಳ ಮತ್ತು 2017-18ನೇ ಸಾಲಿನಲ್ಲಿ ಬಳಕೆಯಾದ ಅನುದಾನದ ಬಗ್ಗೆ ಹಾಗೂ 2018-19ರ ಸಾಲಿನ ಆಯವ್ಯಯ ಅಂದಾಜುಗಳ ಸಂಪೂರ್ಣ ವಿವರಗಳನ್ನು ಮಂಡಳಿಯ ಸಭೆಯಲ್ಲಿ ವಿಶ್ವವಿದ್ಯಾಲಯದ ಹಣಕಾಸು ನಿಯಂತ್ರಣಾಧಿಕಾರಿಗಳು ಸಾದರಪಡಿಸಿದರು.<br>ಸುದೀರ್ಘ ಚರ್ಚೆಯ ನಂತರ ಹಾಗೂ ಸದಸ್ಯರುಗಳ ಸಲಹೆಗಳ ನಂತರ 2017-18ನೇ ಸಾಲಿನ ಪರಿಷ್ಕೃತ ಅನುದಾನ ಮತ್ತು 2018-19ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ ಸಂಬಂಧಿಸಿದಂತೆ ಹಣಕಾಸು ಸಮಿತಿಯ ಶಿಫಾರಸ್ಸುಗಳನ್ನು ಮಂಡಳಿಯು ಅನುಮೋದಿಸಿತು. ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಚರ್ಚೆಯ ಸಮಯದಲ್ಲಿ ಮಾನ್ಯ ಸದಸ್ಯರು ನೀಡಿದ ಸಲಹೆಗಳು ಈ ಕೆಳಗಿನಂತಿವೆ.<br>1. ಗೌರವಾನ್ವಿತ ಸದಸ್ಯರಾದ ಡಾ. ವೈ. ಬಿ. ಪಾಟೀಲ ಇವರು 2017-18ರ ಸಾಲಿನ ಪರಿಷ್ಕೃತ ಆಯವ್ಯಯ ಹಾಗೂ 2018-19ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ದಿನಾಂಕ 31-03-2018ರ ಒಳಗಾಗಿ ಮಂಡಳಿಯ ಅನುಮೋದನೆ ಪಡೆಯದಿರುವುದಕ್ಕೆ ಆಕ್ಷೇಪಿಸಿ, 2015-16 ಮತ್ತು 2016-17ನೇ ಆರ್ಥಿಕ ವರ್ಷದಲ್ಲಿ ಈ ಕುರಿತು ಮಂಡಳಿಯ ಅನುಮೋದನೆ ಪಡೆದಿರುವ ಬಗ್ಗೆ ವಿವರಗಳನ್ನು ಕೇಳಿದರು. |

ಈ ವಿಷಯವಾಗಿ ಮಾನ್ಯ ಕುಲಪತಿಗಳು ಉತ್ತರಿಸುತ್ತಾ, ಸರ್ಕಾರವ ಚುನಾವಣೆ ಘೋಷಣೆ ಹಾಗೂ ನೀತಿ ಸಂಹಿತೆ ಜಾರಿಯಲ್ಲಿರುವ ಪ್ರಯುಕ್ತ ಮಂಡಳಿಯ ಅನುಮೋದನೆಯನ್ನು ಪಡೆಯಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿದರು. ನಂತರ ಹಣಕಾಸು ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು ಸರ್ಕಾರದ ಅನುಮತಿ ಪಡೆದಿರುವ ಬಗ್ಗೆ ಸಭೆಗೆ ತಿಳಿಸಿದರು.

2. ಡಾ. ವೈ. ಬಿ. ಪಾಟೀಲ, ಗೌರವಾನ್ವಿತ ಸದಸ್ಯರು 2018–19ರ ಪ್ರಸಕ್ತ ವರ್ಷದ ಎಪ್ರೀಲ್ ಮತ್ತು ಮೇ ತಿಂಗಳಿನ ಖರ್ಚಿನ ವಿವರಗಳನ್ನು ನೀಡಬೇಕೆಂದು ಕೇಳಿದರು.

   ಮಾನ್ಯ ಕುಲಪತಿಗಳು, ಸರ್ಕಾರದ ತೋಟಗಾರಿಕೆ ಇಲಾಖೆಯ ಕಾರ್ಯದರ್ಶಿಗಳು, ವ್ಯವಸ್ಥಾಪನಾ ಮಂಡಳಿ ಅನುಮೋದನೆ ಷರತ್ತಿಗೆ ಒಳಪಟ್ಟು, ಎಪ್ರೀಲ್, ಮೇ ಮತ್ತು ಜೂನ್ ತಿಂಗಳ ನೌಕರರ ವೇತನ, ಪಿಂಚಣಿ ಹಾಗೂ ಇತರ ಸೇವಾವೆಚ್ಚಗಳನ್ನು ಪಾವತಿಸಲು ಅನುಮತಿ ನೀಡಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.

   ಮುಂದುವರೆದು, ಮಾನ್ಯ ಕುಲಪತಿಗಳು ಪ್ರಸಕ್ತ ಹಣಕಾಸು ವರ್ಷದ ಎಪ್ರೀಲ್ ಮತ್ತು ಮೇ ತಿಂಗಳಿನಲ್ಲಿ ಅವಶ್ಯಕತೆಗನುಸಾರ ಪಾವತಿಸಲಾದ ಹಣಕಾಸು ವಿವರಗಳನ್ನು ಮುಂದಿನ ವ್ಯವಸ್ಥಾಪನ ಮಂಡಳಿಯ ಸಭೆಯಲ್ಲಿ ವಿವರಗಳನ್ನು ಒದಗಿಸಲಾಗುವುದೆಂದು ತಿಳಿಸಿದರು.

   **(ಕ್ರಮ: ಹಣಕಾಸು ನಿಯಂತ್ರಣಾಧಿಕಾರಿಗಳು)**

3. ಇನ್ನು ಮುಂದೆ ವ್ಯವಸ್ಥಾಪನ ಮಂಡಳಿಯಿಂದ ಮಾರ್ಚ್ ತಿಂಗಳ ಅಂತ್ಯದೊಳಗೆ ಆಯವ್ಯಯದ ಅನುಮೋದನೆಯನ್ನು ಕಡ್ಡಾಯವಾಗಿ ಪಡೆಯಬೇಕೆಂದು ಮಾನ್ಯ ಸದಸ್ಯರುಗಳು ಸಲಹೆ ನೀಡಿದರು ಹಾಗೂ ಹಣಕಾಸು ಸಮಿತಿಯಲ್ಲಿ ಪ್ರಸ್ತುತ ಖಾಲಿ ಇರುವ ಸಮಿತಿಯ ಸದಸ್ಯರನ್ನು (ಶ್ರೀ ಬಸವರಾಜ ಶಿವಣ್ಣನವರ ಸ್ಥಾನದಲ್ಲಿ) ಆದಷ್ಟು ಬೇಗ ಮಂಡಳಿಯ ಅಧಿಕಾರೇತರ ಸದಸ್ಯರೊಬ್ಬರನ್ನು ನಾಮನಿರ್ದೇಶನ ಮಾಡಲು ಮಾನ್ಯ ಕುಲಪತಿಗಳಲ್ಲಿ ಮನವಿ ಮಾಡಿದರು.

   **(ಕ್ರಮ: ಹಣಕಾಸು ನಿಯಂತ್ರಣಾಧಿಕಾರಿಗಳು/ಕುಲಸಚಿವರು)**

4. ತೋವಿವಿಯ ಹಣಕಾಸು ಸಮಿತಿಯ ಸಭೆಯನ್ನು ಇನ್ನು ಮುಂದೆ ಪ್ರತಿ ಮೂರು ತಿಂಗಳಿಗೊಮ್ಮೆ ಕರೆದು, ಸಭೆಯಲ್ಲಿ ಆಯವ್ಯಯದ ವಿವರಗಳು, ಅನುದಾನ ಬಳಕೆ, ಸರ್ಕಾರ ಹಾಗೂ ಇತರೆ ಸಂಸ್ಥೆಗಳಿಂದ ಬಂದ ಅನುದಾನದ ಬಗ್ಗೆ ವಿವರಗಳನ್ನು ನೀಡಬೇಕೆಂದು, ಇದರಿಂದ ವಿವಿಯ ಪ್ರಗತಿಯ ಹಿತದೃಷ್ಠಿಯಿಂದ ಹಾಗೂ ಆರ್ಥಿಕ ಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುತ್ತದೆ ಎಂದು ಡಾ. ವೈ. ಬಿ. ಪಾಟೀಲರವರು ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿದರು.

| | |
|---|---|
| | ಇದಕ್ಕೆ ಮಾನ್ಯ ಕುಲಪತಿಗಳು ಅಗತ್ಯತೆಗನುಸಾರವಾಗಿ ಪ್ರತಿ ಮೂರು ತಿಂಗಳಿಗೊಮ್ಮೆ ಹಣಕಾಸು ಸಮಿತಿ ಸಭೆ ಕರೆಯಲು ಕ್ರಮವಿರಿಸಲಾಗುವುದೆಂದು ತಿಳಿಸಿದರು.<br>**(ಕ್ರಮ: ಹಣಕಾಸು ನಿಯಂತ್ರಣಾಧಿಕಾರಿಗಳು)**<br>5. ಮಾನ್ಯ ಶ್ರೀಮತಿ ಪದ್ಮಾವತಿ, ಅಪರ ಹಣಕಾಸು ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರ ರವರು ಸಭೆಯಲ್ಲಿ ಹೊಸ ಸರ್ಕಾರದ ಆರ್ಥಿಕ ನಿರ್ಭಂದಗಳ ಬಗ್ಗೆ ವಿವರಿಸುತ್ತಾ, ವಿಶ್ವವಿದ್ಯಾಲಯಕ್ಕೆ ಈಗಾಗಲೇ ಬಿಡುಗಡೆ ಮಾಡಿರುವ ಅನುದಾನಗಳು ಬಳಸುವುದು, ಹೆಚ್ಚುವರಿ ಅನುದಾನವನ್ನು ಸರ್ಕಾರದಿಂದ ಅವಶ್ಯಕತೆಗೆ ಅನುಸಾರ ಮಂಡಿಸುವ ಅಂಶವನ್ನು ಸಭೆಯ ಗಮನಕ್ಕೆ ತಂದರು.<br>6. ತೋಟಗಾರಿಕೆ ಇಲಾಖೆಯ ಉಪ ಕಾರ್ಯದರ್ಶಿಗಳಾದ ಶ್ರೀ ಪ್ರಸನ್ನ ಕುಮಾರ್ ಇವರು ದೇವಿಹೊಸೂರಿನಲ್ಲಿ ತೋಟಗಾರಿಕಾ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ ಪ್ರಾರಂಭಿಸುವ ಬಗ್ಗೆ ಸರ್ಕಾರದಿಂದ ಕಳೆದ ವರ್ಷ ನೀಡಿರುವ ಅನುದಾನ ರೂ. 5.00 ಕೋಟಿಗಳನ್ನು ಬಳಕೆ ಮಾಡದಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿದರು. ಸರ್ಕಾರವು ನೂತನ ಮಹಾವಿದ್ಯಾಲಯದ ಸ್ಥಾಪನೆಗೆ ರೂ. 10.00 ಕೋಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಈ ಹಿಂದೆ ವಿಶ್ವವಿದ್ಯಾಲಯ ರೂ. 36.00 ಕೋಟಿ ಅನುದಾನಕ್ಕೆ ಆಡಳಿತಾತ್ಮಕ ಅನುಮೋದನೆಗೆ ಮನವಿ ಸಲ್ಲಿಸಿದ್ದು, ಅದನ್ನು ಸರ್ಕಾರ ಪರಿಗಣಿಸದಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.<br>7. ಕಳೆದ ವರ್ಷದ ಉಳಿತಾಯದ ಮೊಬಲಗು ರೂ.2215 ಲಕ್ಷಗಳು ಇದ್ದು, ವಿಶ್ವವಿದ್ಯಾಲಯದ ಆಂತರಿಕ ಆದಾಯಗಳನ್ನು ಹೆಚ್ಚಿಸುವ ಬಗ್ಗೆ ಆವರ್ತ ನಿಧಿ ವಿವರಗಳ ಬಗ್ಗೆ ಚರ್ಚೆ ನಡೆದು, ವ್ಯವಸ್ಥಿತವಾಗಿ ಆರ್ಥಿಕ ವಿನಿಯೋಗ ಮಾಡುವಂತೆ ಮಾನ್ಯ ಸದಸ್ಯರುಗಳು ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿದರು.<br>8. ಮಾನ್ಯ ಸದಸ್ಯರಾದ ಡಾ. ವೈ. ಬಿ. ಪಾಟೀಲ ಇವರು ವಿಶ್ವವಿದ್ಯಾಲಯದ ಪ್ರತಿಷ್ಠಾನ ನಿಧಿ ಠೇವಣಿ ವಿವರಗಳ ಬಗ್ಗೆ ವಿವರಗಳನ್ನು ಕೇಳಿದರು. ಹಣಕಾಸು ನಿಯಂತ್ರಣಾಧಿಕಾರಿಗಳು ಠೇವಣಿ, ಗಳಿಸುತ್ತಿರುವ ಬಡ್ಡಿ, ಸ್ಥಿರ ಠೇವಣಿಯಲ್ಲಿರುವ ವಿವಿಧ ಬ್ಯಾಂಕ್‌ಗಳ ವಿವರಗಳನ್ನು ಸಭೆಗೆ ನೀಡಿದರು. 2017–18ನೇ ಸಾಲಿನಲ್ಲಿ ಒಟ್ಟು ರೂ. 36.16 ಕೋಟಿ ಹಣವನ್ನು ಠೇವಣಿ ವಹಿವಾಟು ಆದ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು. ಪ್ರತಿಷ್ಠಾನ ನಿಧಿ ರೂ. 5.00 ಕೋಟಿ ಹಣವನ್ನು ಬ್ಯಾಂಕಿನಲ್ಲಿ ಠೇವಣಿ ಇಟ್ಟಿರುವ ಬಗ್ಗೆ ಆಯವ್ಯಯ ಪುಸ್ತಕದಲ್ಲಿ ನಮೂದಿಸಲಾಗದಿರುವ ಬಗ್ಗೆ ಕಾರಣ ಕೇಳಿದರು. ಈ ವಿಷಯವಾಗಿ ಉಪ ಹಣಕಾಸು ನಿಯಂತ್ರಣಾಧಿಕಾರಿಗಳು ಪ್ರತಿಷ್ಠಾನ ನಿಧಿ, ಆಯವ್ಯಯ ಖಾತೆಯು ಬೇರೆ ಬೇರೆ ಆಗಿದ್ದು, ಅದು ಈ ಆಯವ್ಯಯದಲ್ಲಿ ಬಳಸಲಾಗಿರುವುದಿಲ್ಲ ಹಾಗೂ ಈ ಕುರಿತು |

<table>
<tr><td></td><td>ವಿವರವನ್ನು ಪ್ರತ್ಯೇಕವಾಗಿ ವಾರ್ಷಿಕ ಲೆಕ್ಕ ಪತ್ರದಲ್ಲಿ ನೀಡಲಾಗುವುದು ಎಂದು ವಿವರಣೆ ನೀಡಿದರು.<br>ಮುಂದುವರೆದು, ವ್ಯವಸ್ಥಾಪನಾ ಮಂಡಳಿಯ ಮಾನ್ಯ ಸದಸ್ಯರು ಹಾಗೂ ವಿಶ್ವವಿದ್ಯಾಲಯದ ಶಿಕ್ಷಣ ನಿರ್ದೇಶಕರಾದ ಡಾ. ಹೆಚ್ ಬಿ. ಲಿಂಗಯ್ಯರವರು, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರಿಸುತ್ತ, ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನಿಂದ 2018ರ ಮಾರ್ಚ್ ತಿಂಗಳ ಕೊನೆಯ ದಿನ ರೂ. 5.19 ಕೋಟಿ ರೂಪಾಯಿಗಳು ಬಿಡುಗಡೆಯಾಗಿದ್ದು, ಅದರಲ್ಲಿ ರೂ. 1.65 ಕೋಟಿ ಖರ್ಚಾಗಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು. ಪ್ರಸಕ್ತ ವರ್ಷದಲ್ಲಿ ಭಾರತೀಯ ಕೃಷಿ ಅನುಸಂದಾನ ಪರಿಷತ್ ಯೋಜನೆಗಳ ಅನುದಾನವು ಇನ್ನು ಬಿಡುಗಡೆಯಾಗದಿರುವ ಬಗ್ಗೆ ಸಭೆಗೆ ತಿಳಿಸಿದರು.<br>**(ಕ್ರಮ: ಹಣಕಾಸು ನಿಯಂತ್ರಣಾಧಿಕಾರಿಗಳು)**</td></tr>
<tr><td>**Item No.1**</td><td>**Revised budget for the year 2017-18 and proposed budget for the year 2018-19 of UHS, Bagalkot.**</td></tr>
<tr><td></td><td>**Discussion and Resolution :**<br>An item with regard to proposed budget for the year 2018-19 and revised budget for the year 2017-18 of University of Horticultural Sciences, Bagalkot were placed before the meeting. The Comptroller, UHS, Bagalkot provided the detailed information to the meeting regarding revised budget (receipt), budget utilized during 2017-18 and proposed budget for the year 2018-19.<br>After detailed discussion and suggestions given by the members in the meeting, the Board accorded its approval for the recommendations of the Finance committee regarding revised budget for 2017-18 and proposed budget for 2018-19.<br>Following are the suggestions given by the Hon'ble members of the Board at the time of Board meeting.<br>1. Hon'ble Member Dr. Y. B. Patil has made an objection for not taking approval for the revised budget for the year 2017-18 and proposed budget for the year 2018-19 before 31-03-2018 by the Board and sought the details of approval of the Board for the year 2015-16 and 2016-17 in this regard.</td></tr>
</table>

| | |
|---|---|
| | Hon'ble Vice-Chancellor explained that, in view of announcement of legislative election and model code of conduct imposed in the state, the approval was not taken in time. And also explained the Board that, Government approval has been taken in this regard as per the approval of the finance committee.<br>2. Dr. Y. B. Patil, Hon'ble Member sought the details of expenditure made during the month of April and May for the present year 2018-19.<br>Hon'ble Vice-Chancellor explained that, the Secretary, Department of Horticulture has accorded approval for payment of employee's salary for the month of April, May & June, pension and other service expenses subject to pending approval of the Board of Management.<br>Further, Hon'ble Vice-Chancellor informed that the details of payment made on essentiality basis during the month of April and May of present financial year will be produced in the next Board meeting.<br>**(Action: Comptroller)**<br>3. Hon'ble Members have suggested to take approval for the budget before ending of March by the Board of Management compulsory henceforth and requested the Hon'ble Vice-Chancellor to nominate the one non-official Board Member to the Finance Committee (in place of Basavaraj Shivannanvar ) immediately.<br>**(Action: Comptroller/Registrar)**<br>4. Dr. Y. B. Patil, Hon'ble Member suggested to conduct finance committee meeting once in three months and to provide budget details viz., utilized budget, budget received from the Govt. and other institutions in the meeting, this will help for the financial progress of the University in the interest of University. |

| | |
|---|---|
| | In response to this, Hon'ble Vice-Chancellor informed that the action will be taken to conduct Finance Committee Meeting once in three months based on necessity.<br>5. Smt. Padmavathi, Additional Secretary, Finance Department, Govt. of Government has explained to the meeting that the financial restrictions of new Government, suggested to utilize the budget released to the University and to submit the proposal for additional budget to the Government as per requirement.<br>6. Sri Prasanna Kumar, Deputy Secretary, Department of Horticulture has expressed an objection for not utilizing the budget of Rs. 5.00 crores released during the last year for establishment of College of Horticulture Engineering and Food Technology, Devihosur. Further, he also informed the Board that, Government has given administrative approval for Rs. 10.00 crores for newly establishment of college, but Government has not considered the request submitted by the University to administrative approval for Rs. 36.00 crores,<br>7. For the last year saving amount is Rs. 2215 lakhs, after lengthy discussion with regard revolving fund to increase the internal income of the University, Hon'ble members have suggested the University to spend finance properly.<br>8. Hon'ble member Dr. Y. B. Patil sought the details regarding University Foundation Fund. The Comptroller produced the details viz., deposit, interest accrued, fixed deposits having in various banks during the meeting. It was informed to the meeting that Rs. 36.16 crores deposit transaction has been made during the year 2017-18 and Hon'ble Member sought the reason for not mentioning the details of Rs. 5.00 crores fixed deposit amount of Foundation Fund in the budget book. In this connection, Deputy Comptroller submitted the Board that, the Foundation Fund and budget accounts are different, |

| | |
|---|---|
| | will not be utilized and information will be submitted in separate annual account book.<br>Further, Dr. H. B. Lingaiah, Hon'ble Board Member and Director of Education responding to the question of Hon'ble Member informed the meeting that, an amount of Rs. 5.19 crores has been released by the Indian Council of Agriculture Research during the last day of March, 2018, out of this an amount of Rs. 1.65 crores has been utilized. And also informed to the meeting that budget from various projects of Indian Council of Agriculture Research not yet released.<br>**(Action: Comptroller)** |
| | **ಟೇಬಲ್ ಕಾರ್ಯಸೂಚಿಗಳು** |
| | **Table Items** |
| **ಕಾರ್ಯಸೂಚಿ ಸಂ.1** | **ತೋಟಗಾರಿಕಾ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯವನ್ನು ಬಾಗಲಕೋಟೆಯ ಹವೇಲಿ ಆವರಣಕ್ಕೆ ಸ್ಥಳಾಂತರಿಸಲು ಹಾಗೂ ವಿದ್ಯಾರ್ಥಿ, ವಿದ್ಯಾರ್ಥಿನಿಯರ ವಸತಿ ನಿಲಯ, ಬೋಧನಾ ಕೊಠಡಿ, ಪ್ರಯೋಗಾಲಯ, ಆಡಳಿತ ಕಛೇರಿ ಹಾಗೂ ಊಟದ ಕೊಠಡಿಗಳ ದುರಸ್ತಿ / ನವೀಕರಣ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲು ಅನುಮೋದನೆ.** |
| | **ಚರ್ಚೆ ಮತ್ತು ಠರಾವು :**<br>ತೋಟಗಾರಿಕೆ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯವನ್ನು ಹವೇಲಿ ಆವರಣಕ್ಕೆ ಸ್ಥಳಾಂತರಿಸಲು ಹಾಗೂ ವಿದ್ಯಾರ್ಥಿ, ವಿದ್ಯಾರ್ಥಿನಿಯರ ವಸತಿ ನಿಲಯ, ಬೋಧನಾ ಕೊಠಡಿ, ಪ್ರಯೋಗಾಲಯ, ಆಡಳಿತ ಕಛೇರಿ ಹಾಗೂ ಊಟದ ಕೊಠಡಿಗಳ ದುರಸ್ತಿ / ನವೀಕರಣ ಕಾಮಗಾರಿಗೆ ಟೆಂಡರ್ ಆಹ್ವಾನಿಸಲು ಕುರಿತ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ, ಮಂಡಳಿಯು ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಈ ಕೆಳಗಿನಂತೆ ವಿಶ್ವವಿದ್ಯಾಲಯಕ್ಕೆ ತಿಳಿಸಿದರು.<br>➢ ಮಾನ್ಯ ಸದಸ್ಯರು ಹಾಗೂ ಅಪರ ಹಣಕಾಸು ಕಾರ್ಯದರ್ಶಿಗಳಾದ ಶ್ರೀಮತಿ ಪದ್ಮಾವತಿಯವರು ಹಾವೇರಿ ಜಿಲ್ಲೆಯ ದೇವಿಹೋಸುರಿನಲ್ಲಿ ತೋಟಗಾರಿಕೆ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಸ್ಥಾಪನೆಗೆ ಸರ್ಕಾರದಿಂದ ಬಿಡುಗಡೆಯಾದ ರೂ. 5.00 ಕೋಟಿ ಹಣವನ್ನು ಅಲ್ಲಿಯ ಅಭಿವೃದ್ಧಿಗೆ ಬಳಸಬೇಕೆಂದು ಆ ಹಣವನ್ನು ಹವೇಲಿ ಆವರಣದ ಕಟ್ಟಡಗಳ ದುರಸ್ತಿಗೆ ಬಳಕೆ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸುತ್ತಾ, ಸದರಿ ಅನುದಾನವನ್ನು ಬೇರೆ ಆವರಣಕ್ಕೆ ಬಳಸುವಂತಿಲ್ಲ ಎಂದು ಸಭೆಗೆ ತಿಳಿಸಿದರು. |

| | |
|---|---|
| | ಮುಂದುವರೆದು, ತುರ್ತು ದುರಸ್ತಿ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅನುದಾನವನ್ನು ಬಳಸುವುದಾದರೆ, ಸರ್ಕಾರಕ್ಕೆ ಪತ್ರ ಬರೆದು, ಸೂಕ್ತ ಸ್ಪಷ್ಟೀಕರಣ ಕೊಟ್ಟು ಸರ್ಕಾರದಿಂದ ಅನುಮತಿ ಬಂದ ನಂತರ ಬಳಸಬಹುದೆಂದು ಸೂಚಿಸಿದರು.<br>➢ ಡಾ, ವೈ. ಬಿ. ಪಾಟೀಲ, ಗೌರವಾನ್ವಿತ ಸದಸ್ಯರು ಹವೇಲಿ ಆವರಣವು ಆಲಮಟ್ಟಿ ಜಲಾಶಯದ ಎತ್ತರ ಏರಿಸಿದಾಗ ನೀರಿನಲ್ಲಿ ಮುಳಗಡೆಯಾಗುವುದರಿಂದ, ಹವೇಲಿ ಆವರಣದಲ್ಲಿ ಸೊಳ್ಳೆಗಳ ಕಾಟ, ಹಿನ್ನೀರಿನಲ್ಲಿ ಮೊಸಳೆಗಳ ಹಾವಳಿ ಬರುವುದರಿಂದ ಸದರಿ ಆವರಣಕ್ಕೆ ತೋಟಗಾರಿಕೆ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯವನ್ನು ಸ್ಥಳಾಂತರಿಸುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು.<br>➢ ತೋಟಗಾರಿಕೆ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ ಸ್ಥಾಪನೆಯ ವಿಷಯದಲ್ಲಿ ಸರ್ಕಾರವನ್ನು ಮನವೊಲಿಸಲು, ಹೊಸ ಸರ್ಕಾರದ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರ (ಕೃಷಿ ತಜ್ಞರಾದ ಶ್ರೀ ಸುಬ್ರಂಮಣ್ಯಂ) ಗಮನಕ್ಕೆ ತಂದು, ಹೊಸ ಮಹಾವಿದ್ಯಾಲಯ ಸ್ಥಾಪನೆ ಹಾಗೂ ಅಭಿವೃದ್ಧಿ ಬಗ್ಗೆ ಆಡಳಿತಾತ್ಮಕ ಅನುಮೋದನೆ ಮತ್ತು ಅನುದಾನ ಬಿಡುಗಡೆಯ ಪ್ರಯತ್ನಿಸಲು ಮಂಡಳಿಯು ಸಲಹೆ ನೀಡಿತು.<br>ಕೊನೆಗೆ, ಮೇಲಿನ ಕಾರ್ಯಸೂಚಿಗೆ ಸಂಬಂಧಿಸಿದಂತೆ, ಕಟ್ಟಡಗಳ ತುರ್ತು ದುರಸ್ತಿ ಮತ್ತು ಅವಶ್ಯಕತೆಗಳ ಕುರಿತು ಸೂಕ್ತ ಸ್ಪಷ್ಟೀಕರಣಗಳೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ನಡುವಳಿಗಳ ದೃಢೀಕರಣಕ್ಕಾಗಿ ಕಾಯದೇ ಸಲ್ಲಿಸಿ, ಸರ್ಕಾರದ ಅನುಮತಿ ಬಂದನಂತರ ಸೂಕ್ತ ಕ್ರಮ ಕೈಗೊಳ್ಳಲು ಮಂಡಳಿಯು ನಿರ್ಧರಿಸಿತು.<br>**(ಕ್ರಮ: ಆಸ್ತಿ ಅಧಿಕಾರಿಗಳು/ಕುಲಸಚಿವರು)** |
| **Item No.1** | **Approval for shifting of College of Horticulture Engineering and Food Technology to Haveli campus and to invite tender for repair / renovation works of hostels for boys and girls, dining hall, class room, laboratories and administrative office etc. at Haveli campus buildings (old).** |
| | **Discussion & Resolution :**<br>After perusal of the proposal for approval for shifting of College of Horticulture Engineering and Food Technology to Haveli campus and to invite tender for repair / renovation works of hostels for boys and girls, dining hall, class room, laboratories and administrative office etc. at Haveli campus buildings (old), the members have suggested as follows ; |

| | |
|---|---|
| | ➢ Smt. Padmavathi, Hon'ble Member and Additional Secretary, Finance Department has objected for utilizing the budget for repair of buildings of Haveli Campus, as the budget of Rs. 5.00 crores which has been sanctioned by the Government for the purpose of development of College of Horticulture Engineering and Food Technology, Devihosur, Haveri District and the budget released need to be utilized for the purpose. They informed the Board that, said budget will not be utilized for other campus. Further, in case of emergency repair works in the interest of students, the budget may be utilized after getting permission from the Government by writing a letter to the Government with proper justification.<br>➢ Dr. Y. B. Patil Hon'ble member objected to shifting of College of Horticulture Engineering and Food Technology to Haveli campus stating that, if the Almatti water level height is increased, there will be mosquito bites, crocodiles plagues from back water.<br>➢ Board suggested to approach Finance Advisor (Agriculture Scientist Sri Subramanyam) to new Govt. Chief Minister to bring the matter of establishment of College of Horticulture Engineering and Food Technology to his kind notice and for taking administrative approval for release of budget for development of the college.<br>Finally, with respect to above item, Board decided that, in case of emergency repair works and its necessity, it was decided to submit the proposal with proper justification to the Government without confirmation of the minutes and to take necessary action after receipt of approval from the Government.<br>**(Action: Estate Officer/Registrar)** |

| | |
|---|---|
| **ಕಾರ್ಯಸೂಚಿ ಸಂ.2** | **ತೋಟಗಾರಿಕಾ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯಕ್ಕೆ ಪಿಠೋಪಕರಣ ಮತ್ತು ಕಛೇರಿ ಉಪಕರಣವನ್ನು ಖರೀದಿಸಲು ಅನುಮೋದನೆ.** |
| | **ಚರ್ಚೆ ಮತ್ತು ಠರಾವು :**<br>ತೋಟಗಾರಿಕಾ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯಕ್ಕೆ ಪಿಠೋಪಕರಣ ಮತ್ತು ಕಛೇರಿ ಉಪಕರಣವನ್ನು ಖರೀದಿಸುವ ಕುರಿತ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ, ಸೂಕ್ತ ಸ್ಪಷ್ಟೀಕರಣಗಳೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ನಡುವಳಿಗಳ ದೃಢೀಕರಣಕ್ಕಾಗಿ ಕಾಯದೇ ಸಲ್ಲಿಸಿ, ಸರ್ಕಾರದ ಅನುಮತಿ ಬಂದನಂತರ ಸೂಕ್ತ ಕ್ರಮ ಕೈಗೊಳ್ಳಲು ಮಂಡಳಿಯು ನಿರ್ಧರಿಸಿತು.<br>**(ಕ್ರಮ: ಆಸ್ತಿ ಅಧಿಕಾರಿಗಳು/ಕುಲಸಚಿವರು)** |
| **Item No.2** | **Approval for procurement of furniture and other equipments for the College of Horticulture Engineering and Food Technology (CHEFT).** |
| | **Discussion & Resolution :**<br>After perusal of the proposal for procurement of furniture and other equipments for the College of Horticulture Engineering and Food Technology (CHEFT), it was decided to submit the proposal with proper justification to the Government without confirmation of the minutes and to take necessary action after receipt of approval from the Government.<br>**(Action: Estate Officer/Registrar)** |
| | **ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ಇನ್ನಿತರ ವಿಷಯಗಳು ಹಾಗೂ ಸಲಹೆಗಳು** |
| | ➢ ವ್ಯವಸ್ಥಾಪನ ಮಂಡಳಿಯ ಸದಸ್ಯರುಗಳಿಗೆ ಇಸ್ರೇಲ್ ದೇಶಕ್ಕೆ ಅಧ್ಯಯನ ಪ್ರವಾಸ ಕಾರ್ಯಕ್ರಮವನ್ನು ಕೈಗೊಳ್ಳುವ ಕುರಿತು ಸೂಕ್ತ ಕ್ರಮಕೈಗೊಳ್ಳಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ಸೂಚಿಸಿತು. **(ಕ್ರಮ: ಕುಲಸಚಿವರು)**<br>➢ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯ ಕನಿಷ್ಠ ವೇತನದ ಕುರಿತು ಸರ್ಕಾರದ ಆದೇಶದ ಪ್ರಕಾರ ವಿಶ್ವವಿದ್ಯಾಲಯದಲ್ಲಿರುವ ದಿನಗೂಲಿ ನೌಕರರಿಗೂ ವೇತನ ನಿಗಧಿಪಡಿಸಲು ಮತ್ತು ಏಕರೂಪದ ವೇತನದ ಬಗ್ಗೆ ಸುದೀರ್ಘ ಚರ್ಚೆಯ ನಂತರ, ಮಂಡಳಿಯು ಮಂಡಳಿಯು ವಿಶ್ವವಿದ್ಯಾಲಯದಲ್ಲಿರುವ ದಿನಗೂಲಿ ನೌಕರರಿಗೆ ಏಕರೂಪದ ವೇತನ ನಿಗಧಿಪಡಿಸಲು ಕ್ರಮಕೈಗೊಳ್ಳುವಂತೆ ವಿಶ್ವವಿದ್ಯಾಲಯಕ್ಕೆ ಸೂಚಿಸಿತು. **(ಕ್ರಮ: ಆಡಳಿತಾಧಿಕಾರಿಗಳು)** |

| | |
|---|---|
| | ➢ ಕಾರ್ಯದಕ್ಷತೆಯನ್ನು ಹೆಚ್ಚಿಸಲು, ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿಗಳಿಗೆ ತರಬೇತಿಗೆ ನಿಯೋಜನೆ ಮಾಡುವುದು, ರಾಷ್ಟ್ರೀಯ, ಅಂತರಾಷ್ಟ್ರೀಯ ಸಮ್ಮೇಳನಕ್ಕಾಗಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ ಚರ್ಚಿಸಲಾಯಿತು. ಮಾನ್ಯ ಕುಲಪತಿಗಳು ಹಾಗೂ ಅಧ್ಯಕ್ಷರು, ಹೆಚ್ಚು ಹೆಚ್ಚು ಶಿಕ್ಷಕರನ್ನು ತರಬೇತಿಗೆ ಕಳುಹಿಸಲಾಗುತ್ತಿದ್ದು, ಶಿಕ್ಷಣ ಗುಣಮಟ್ಟದ ಅಭಿವೃದ್ಧಿಗೆ ತೋವಿವಿ ಕೈಗೊಂಡ ಕ್ರಮಗಳ ಬಗ್ಗೆ ಸಭೆಗೆ ವಿವರಿಸಿದರು. **(ಕ್ರಮ: ಆಡಳಿತಾಧಿಕಾರಿಗಳು)**<br>➢ ಪ್ರತಿ ಮೂರು ತಿಂಗಳಿಗೊಮ್ಮೆ ಹಣಕಾಸು ಸಮಿತಿ ಸಭೆ ನಡೆಸಿ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ವಿಷಯ ಮಂಡಿಸಲು ಮಂಡಳಿಯು ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿತು. **(ಕ್ರಮ: ಹಣಕಾಸು ನಿಯಂತ್ರಣಾಧಿಕಾರಿಗಳು)**<br>➢ ಆಂತರಿಕ ಆದಾಯ ಹೆಚ್ಚಿಸಲು, ವಿಶ್ವವಿದ್ಯಾಲಯದ ಎಲ್ಲ ಕಾಲೇಜುಗಳು ಹಾಗೂ ಸಂಶೋಧನಾ ಕೇಂದ್ರಗಳಲ್ಲಿ ತೋಟಗಾರಿಕೆ ಸಸ್ಯಗಳ ನರ್ಸರಿ ಪ್ರಾರಂಭಿಸಿ, ರೈತರಿಗೆ ಗುಣಮಟ್ಟದ ಸಸಿಗಳನ್ನು ಪೂರೈಸಿ ಹೆಚ್ಚಿನ ಆದಾಯ ಗಳಿಸಲು ವಿಪುಲ ಅವಕಾಶಗಳು ಇರುವುದರ ಬಗ್ಗೆ ಮಾನ್ಯ ಸದಸ್ಯರುಗಳು ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿದರು. **(ಕ್ರಮ: ಸಂಶೋಧನಾ ನಿರ್ದೇಶಕರು)** |
| | **Any other items with permission of the Chair and suggestions** |
| | ➢ Board directed the University to take necessary action for conducting study tour to Israel for the Board Members. **(Action: Registrar)**<br>➢ After detailed deliberations, with respect to prescribing minimum pay to the daily wages employees of the University as per the orders of Labour Department, Government of Karnataka and common salary, the Board directed the University to prescribe the common salary to the daily wages employees of the University. **(Action: Administrative Officer)**<br>➢ Discussed with respect to deputation of teaching and non-teaching staff for trainings, permission for attending national, inter-national conferences. Hon'ble Vice-Chancellor and Chairman informed to the meeting that the more number of teachers are deputing for trainings and also informed |

| | |
|---|---|
| | regarding action taken by the University for improvement of quality education. (**Action: Administrative Officer)**<br>➢ Board suggested the University to conduct the meeting of Finance Committee once in three months for placing the matters of financial status. **(Action: Comptroller)**<br>➢ Hon'ble Members expressed that there are more number of opportunities for increasing internal income by establishing nurseries at all the Colleges and Research Stations, for getting more income by providing quality plants to the farmers. **(Action: Director of Research)** |

ವಂದಾನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

The meeting was concluded with the vote of thanks.



**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,**
**ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ**
**Registrar & Member-Secretary**
**Board of Management, UHS, Bagalkot**